ಆರೋಗ್ಯ ಇಲಾಖೆಯ ಬಗ್ಗೆ, ಪಶು ಸಂಗೋಪನಾ ಇಲಾಖೆ ಬಗ್ಗೆ) ಅವಕಾಶ ಮಾಡಿಕೊಡಿ. ಈ ಮೂರೂ ಇಲಾಖೆಗಳಲ್ಲಿ ಹೊಂದಾಣಿಕೆ ಅಭಾವ ಏನಾದರೂ ಇದ್ದರೆ ಅದರ ಬಗ್ಗೆ ನಾವು ಹೇಳಬೇಕಾಗುತ್ತದೆ. ಶಿಕ್ಷಣ ಸಚಿವರು ಹೇಳುತ್ತಾರೆ, ಇದು ನಮಗೆ ಸೇರಿದೆ ಎಂದು, ಆರೋಗ್ಯ ಸಚಿವರು ಹೇಳುತ್ತಾರೆ, ಇದು ನಮಗೆ ಸೇರಿದೆ ಎಂದು. ಪಶು ಸಂಗೋಪನಾ ಸಚಿವರು ಹೇಳುತ್ತಾರೆ. ಇದು ನಮಗೆ ಸೇರಿದೆ ಎಂದು. ಪಂಚಾಯತ್ ರಾಜ್ ಸಚಿವರು ನಮಗೆ ಸೇರಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಸಿಟಿ ವ್ಯಾಪ್ತಿಯಲ್ಲಿರತಕ್ಕ ಶಾಸಕರು ಯಾರಿರುತ್ತಾರೆ, ಅವರು ಈ ಜಿಲ್ಲಾ ಪರಿಷತ್ತುಗಳಲ್ಲಿ ಸದಸ್ಯರಾಗಿ ಹೋಗಿ ಮಾತನಾಡತಕ್ಕ ಅವಕಾಶ ಇಲ್ಲ. ಈಗ ತಾವು ಏನು ಹೇಳಿದ್ದೀರಿ ಈ ಸಮಸ್ಯೆ ಸಿಟಿಯಲ್ಲಿರತಕ್ಕ ವಿದ್ಯಾಸಂಸ್ಥೆಗಳು ಪಶು ಸಂಗೋಪನಾ ಸಂಸ್ಥೆಗಳು ಏನಿವೆ ಅವುಗಳ ಬಗ್ಗೆ ಜಿಲ್ಲಾ ಪರಿಷತ್ತಿಗೆ ಹೋಗಿ ಹೇಳಬೇಕೆಂದರೆ ಅವಕಾಶ ಇಲ್ಲ. ಆದರೆ ಮುಂದೆ ಏನು ಒಂದು ತಿದ್ದುಪಡಿ ತರುತ್ತಿದೇವೆ ಆಗ ಇದನ್ನು ಯೋಚನೆ ಮಾಡತಕ್ಕ ವಿಷಯವಾಗಿದೆ.

ಗದಗ ಸಹಕಾರಿ ಎಣ್ಣೆ ಕಾರ್ಖಾನೆಯ ನವೀಕರಣ

೬೦೪. ಶ್ರೀ ಕೆ. ಪಿಚ್. ಪಾಟೀಲ್ (ಗದಗ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಸಹಕಾರಿ ಎಣ್ಣೆ ಘಟಕ, ಗದಗ ಇದರ ನವೀಕರಣಕ್ಕಾಗಿ ಸರ್ಕಾರದ ಶಿಫಾರಸ್ಸಿನ ಮೇಲೆ ಎನ್.ಸಿ.ಡಿ.ಸಿಯವರು ೨೯೧ ಲಕ್ಷ ರೂ.ಗಳನ್ನು ಮಂಜೂರು ಮಾಡಿರುವುದು ನಿಜವೇ ?

ಆ) ಮೊದಲ ಕಂತಾಗಿ ಕೊಟ್ಟ ಹಣವೆಷ್ಟು ?

ಇ) ಈ ಯೋಜನೆ ಪೂರ್ತಿ ಮುಗಿದಿದ್ದರೂ ಸಹ ಇನ್ನೂ ಸರ್ಕಾರದವರು ಹಣ ಬಿಡುಗಡೆ ಮಾಡದಿರಲು ಕಾರಣವೇನು ?

ಈ) ಎನ್.ಸಿ.ಡಿ.ಸಿ.ಯಿಂದ ಮಂಜೂರಾದ ಹಣವನ್ನು ಇನ್ನೂ ಪಡೆಯದೆ ಇರಲು ಕಾರಣವೇನು ? ಹಣದ ಅಭಾವದಿಂದ ಸದರಿ ಸಂಸ್ಥೆಯ ವ್ಯವಹಾರವು ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಮನೋರಮಾ ಮಂಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು) —

ಅ) ಹೌದು

ಆ) ರೂ. ೧೬೮.೬೮ ಲಕ್ಷಗಳು

ಇ) ಎನ್.ಸಿ.ಡಿ.ಸಿ.ಯವರ ಪರತ್ತಿನಂತೆ ಎರಡನೇ ಕಂತನ್ನು ಬಿಡುಗಡೆ ಮಾಡಬೇಕಾದಲ್ಲಿ ಸಂಘವು ತನ್ನ ಪಾಲಿನ ಪೂರ್ತಿ ಹಣವನ್ನು ಪೂರ್ಣವಾಗಿ ಸಂಗ್ರಹಿಸಬೇಕಾಗಿತ್ತು. ಆದರೆ ಸಂಘವು ರೂ. ೦೦ಲಕ್ಷ ಬಾಕಿ ಹಣವನ್ನು ಕೂಡಿಸಿಲ್ಲದ ಕಾರಣ ಮತ್ತು ಘಟಕವನ್ನು ವಿಧಿಸಿದ್ದ ಅವಧಿಯೊಳಗೆ ಪೂರ್ಣಗೊಳಿಸಿರುವುದಿಲ್ಲವಾದ್ದರಿಂದ ಎರಡನೇ ಕಂತನ್ನು ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ.

ಈ) ಎನ್.ಸಿ.ಡಿ.ಸಿ.ಯವರಿಂದ ಯೋಜನೆಯಂ ಮಂಜೂರಾದ ನಂತರ ರಾಜ್ಯ ಸರ್ಕಾರದವರು ಮೊದಲನೆಯ ಕಂತಿನ ಹಣವನ್ನು ಬಿಡುಗಡೆ ಮಾಡಿ ಅದನ್ನು ಪೂರ್ಣ ಉಪಯೋಗಿಸಿಕೊಂಡ ನಂತರ ಮತ್ತು ಎನ್.ಸಿ.ಡಿ.ಸಿ.ಯವರು ವಿಧಿಸಿರುವ ಷರತ್ತುಗಳನ್ನು ಪಾಲಿಸಿದ ನಂತರ ಎರಡನೆ ಕಂತನ್ನು ಎನ್ ಸಿ.ಡಿ.ಸಿ.ಯವರಿಂದ ಪಡೆಯಬೇಕಾಗಿತ್ತು. ಆದರೆ ಸಂಘವು ಮೇಲೆ ತಿಳಿಸಿರುವಂತೆ ಷರತ್ತನ್ನು ಪಾಲಿಸಲಿಲ್ಲದ ಕಾರಣ ಎರಡನೇ ಕಂತನ್ನು ಬಿಡುಗಡೆ ಮಾಡಲಾಗಲಿಲ್ಲ. ಈ ಯೋಜನೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ. ಈ ಯೋಜನೆಗಾಗಿ ಹಣವನ್ನು ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಭರಿಸಬೇಕಾಗುತ್ತದೆ. ಆದರೆ ಈ ಯೋಜನೆಗಾಗಿ ಜಿಲ್ಲಾ ಪರಿಷತ್ತು, ಧಾರವಾಡ ಇವರು ಯಾವ ಹಣವನ್ನು ಆಯವ್ಯಯದಲ್ಲಿ ಒದಗಿಸಿರುವುದಿಲ್ಲ. ಆದುದರಿಂದ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ತು, ಧಾರವಾಡ ಇವರಿಗೆ ಈ ಯೋಜನೆಗೆ ಹಣವನ್ನು ಒದಗಿಸಿಕೊಡಲು ಈಗಾಗಲೇ ನಿರ್ದೇಶಿಸಲಾಗಿದೆ.

೩–೦೦ ಪಿ. ಎಂ.

ಶ್ರೀ ಕೆ.ಹೆಚ್. ಪಾಟೀಲ್.–ಮಾನ್ಯ ಅಧ್ಯಕ್ಷರೆ, ೧೦ ಲಕ್ಷ ರೂಪಾಯಿಗಳನ್ನು ಕೂಡಿಸಿ ಈಗಾಗಲೇ ಒಂದೂವರೆ ವರ್ಷ ಆಯಿತು. ಹಿಂದಿನ ಸರ್ಕಾರ ಅಮೌಂಟ್ ರಿಲೀಸ್ ಮಾಡಿರಲಿಲ್ಲ. ಅದು ಸರ್ಕಾರದ ತಪ್ಪು. ಅದು ಈ ಸರ್ಕಾರದಿಂದ ಪರಿಹಾರವಾಗಿದೆ. ಫೈನಾನ್ಸ್ ಮಿನಿಸ್ಟರ್ ಮೊನ್ನೆ ಎಲ್ಲ ಅಧಿಕಾರಿಗಳನ್ನು ಕರೆದು ತೀರ್ಮಾನ ತೆಗೆದುಕೊಂಡಿರುವುದರಿಂದ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ೩೦ನೇ ತಾರೀಖಿನೊಳಗೆ ಹಣ ರಿಲೀಸ್ ಆಗುತ್ತದೆಂದು ಮಂತ್ರಿಗಳು ಆಶ್ವಾಸನೆ ಕೊಟ್ಟಿರು. ಆದನ್ನು ನಂಬಿ ನಾನು ಉಪ ಪ್ರಶ್ನೆ ಕೇಳುವುದಿಲ್ಲ.

ಪ್ರಶ್ನೆ ಸಂಖ್ಯೆ : ೧೨೪ (೩೪೭)

ಸದಸ್ಯರು ಹಾಜರಿರಲಿಲ್ಲ.

ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಆಸ್ಪತ್ರೆ

೨೦೩. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ೧೦ ಹಾಸಿಗೆಗಳ ಹೆರಿಗೆ ಆಸ್ಪತ್ರೆಯನ್ನು ಪ್ರಾರಂಭಿಸಲು ಮನವಿಗಳೇನಾದರೂ ಬಂದಿದೆಯೇ ?

ಆ) ಈ ಆಸ್ಪತ್ರೆಯನ್ನು ಪ್ರಾರಂಭಿಸಲು ಬೆಂಗಳೂರಿನ ಶ್ರೀ ಅಶೋಕ ಜ್ಯೂಯಲರ್ಸ್ ಮಾಲೀಕರಾದ ಶ್ರೀ ಕುದೂರು ಕೆ. ಎ. ಸತ್ಯನಾರಾಯಣ ಶೆಟ್ಟಿ ಎಂಬುವರು ಸರ್ಕಾರಕ್ಕೆ ಒಂದು ಲಕ್ಷದ ದೇಣಿಗೆಯನ್ನು ಕೊಡಲು ಒಪ್ಪಿರುವುದು ನಿಜವೇ ?

ಇ) ದಾನಿಗಳು ಮುಂದೆ ಬಂದು ೭೦ಸಾವಿರ ರೂ.ಗಳ ದೇಣಿಗೆಯನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಆಸ್ಪತ್ರೆ ಕೆಲಸವನ್ನು ಪ್ರಾರಂಭಿಸದಿರಲು ಕಾರಣಗಳೇನು ?

ಈ) ಈಗಲಾದರೂ ಈ ಆಸ್ಪತ್ರೆ ಕಟ್ಟಲು ಮಂಜೂರಾತಿ ನೀಡಿ ಕಟ್ಟಡ ಕೆಲಸ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು).—

ಅ) ಬಂದಿದೆ

ಆ) ಹೌದು

ಇ) ದಾನಿಗಳು ೧.೦೨ ಲಕ್ಷ ರೂ.ಗಳ ದೇಣಿಗೆಯನ್ನು ನೀಡಲು ಮುಂದೆ ಬಂದಿದ್ದರೂ, ೧೦ ಹಾಸಿಗೆಗಳಿರುವ ಒಂದು ಹೆರಿಗೆ ಆಸ್ಪತ್ರೆಯನ್ನು ಸ್ಥಾಪನೆ ಮಾಡಲು ಕಟ್ಟಡಕ್ಕೆ ಸುಮಾರು ೩.೦೦ ಲಕ್ಷ ರೂ.ಗಳ ವೆಚ್ಚ ಬರುತ್ತದೆ, ಅಲ್ಲದೆ ಸಿಬ್ಬಂದಿ ಸಂಬಳ ಸಾರಿಗೆ ಬಗ್ಗೆ ಆವರ್ತ ವೆಚ್ಚ ಪ್ರತಿ ವರ್ಷಕ್ಕೆ ೨.೦೦ ಲಕ್ಷ ರೂ.ಗಳು ಬರುತ್ತದೆ. ಈ ವೆಚ್ಚವನ್ನು ಭರಿಸಲು ಜಿಲ್ಲಾ ಪರಿಷತ್ತು ಆಯವ್ಯಯದಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತು ಈ ವೆಚ್ಚವನ್ನು ಭರಿಸಲು ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಲ್ಲವಾದ್ದರಿಂದ ಇಲ್ಲಿಯವರೆವಿಗೂ ಈ ಆಸ್ಪತ್ರೆ ತೆರೆಯಲು ಸರ್ಕಾರ ಮಂಜೂರಾತಿ ನೀಡಿಲ್ಲ. ಈ ವಿಷಯ ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್‌ನೊಂದಿಗೆ ಸಮಾಲೋಚನೆ ನಡೆಸಿ ಹಣಕಾಸಿನ ವ್ಯವಸ್ಥೆಯಾದ ಮೇಲೆ ಮಂಜೂರಾತಿ ನೀಡಲಾಗುವುದು.

ಈ) (ಇ)ನಲ್ಲಿ ಪ್ರಸ್ತಾಪಿಸಿರುವ ಹಣಕಾಸಿನ ವ್ಯವಸ್ಥೆಯಾದ ಕೂಡಲೇ ಮಂಜೂರಾತಿ ನೀಡಲು ಪರಿಶೀಲಿಸಲಾಗುವುದು.

ಶ್ರೀ ಹೆಚ್. ಎಂ. ರೇವಣ್ಣ.—ಮಾನ್ಯ ಸಭಾಧ್ಯಕ್ಷರೆ, ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ೧೦ ಹಾಸಿಗೆಗಳುಳ್ಳ ಹೆರಿಗೆ ಆಸ್ಪತ್ರೆಯನ್ನು ಪ್ರಾರಂಭಿಸಲು ಶ್ರೀ ಕೆ. ಎ. ಸತ್ಯನಾರಾಯಣ ಶೆಟ್ಟಿ ಅವರು ಒಂದು ಲಕ್ಷ ರೂಪಾಯಿ ದೇಣಿಗೆಯನ್ನು ೧೯೮೬ರಲ್ಲಿ ಕೊಟ್ಟಿದ್ದಾರೆ. ಈಗ ಆ ಕಟ್ಟಡ ಕಟ್ಟಿದ್ದೇಕಾದರೆ ೩ ಲಕ್ಷ ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತಿನವರು ಮಿಕ್ಕ ಹಣವನ್ನು ಕೊಡಲು ಒಪ್ಪಿಗೆ ಕೊಟ್ಟಿರುವುದು ಸಚಿವರಿಗೆ ತಿಳಿದಿದೆಯೇ